



ರಾಜಪ್ರಭುತ್ವದ ಪ್ರೀತಮ್ಕೋ–ಕೋಲಿ ದೊರೆ ಜಯವಾ ಮುಕ್ನೆ ಮಹಾರಾಜರು ಜವ್ಹರ್‌ನಲ್ಲಿ ಈ ದೇವಸ್ಥಾನವನ್ನು ನಿರ್ಮಿಸಿದರು ಎನ್ನಲಾಗಿದೆ.

ಪ್ರತೀ ವರ್ಷ ಹೊಲದ ಮೊದಲ ಫಸಲು, ತರಕಾರಿ ಹಣ್ಣುಗಳನ್ನು ಊರಿನ ಜನತೆ ದೇವಿಗೆ ಅರ್ಪಿಸಿ ಪೂಜಿಸುತ್ತಾರೆ. ಪಿತೃ ಅಮಾವಾಸ್ಯೆಯ ದಿನದಂದು ಬುಡಕಟ್ಟು ಜಾತ್ರೆ ನಡೆಯುತ್ತದೆ. ಮೊದಲ ಬೆಳೆಯನ್ನು ತಾಯಿಗೆ ಅರ್ಪಿಸುವುದರಿಂದ ಮನೆಯಲ್ಲಿ ಸುಖ, ಶಾಂತಿ, ಸಮೃದ್ಧಿ ನೆಲೆಸುತ್ತದೆ ಎಂಬುದು ಜನರ ನಂಬಿಕೆ.

ದೇವಾಲಯದ ಪ್ರವೇಶ ದ್ವಾರದಲ್ಲಿ ಧ್ವಜಸ್ತಂಭವಿದ್ದು ಅದರ ಮೇಲೆ ದೊಡ್ಡ ಧ್ವಜ ಸದಾ ಹಾರಾಡುತ್ತಿರುತ್ತದೆ. ದೇವಾಲಯದ ಮುಂಭಾಗದಲ್ಲಿ ಸಭಾಮಂಟಪ, ಹಾಗೂ ಆಕರ್ಷಕ ಎರಡು ದೀಪಸ್ತಂಭಗಳಿವೆ, ಅವುಗಳ ನಡುವೆ ಮುಖ್ಯ ಹೋಮಕುಂಡವಿದೆ. ಅದರ ಎರಡೂ ಬದಿಯಲ್ಲಿ ಇನ್ನೆರಡು ಹೋಮಕುಂಡಗಳಿವೆ. ಪಕ್ಕದಲ್ಲಿ ದೊಡ್ಡ ಅಶ್ವತ್ಥ ವೃಕ್ಷವೂ ಇದೆ. ಪ್ರತಿ ವರ್ಷ ಚೈತ್ರ ಪೌರ್ಣಿಮೆಯಂದು ದೊಡ್ಡ ಯಜ್ಞ ನಡೆಯುವುದು. ಆ ದಿನ ದೇವಿಯ ದರ್ಶನಕ್ಕಾಗಿ ಸಾವಿರಾರು ಭಕ್ತರು ಕಾಲ್ನಡಿಗೆಯಲ್ಲಿ ದೇವಸ್ಥಾನಕ್ಕೆ ಬರುತ್ತಾರೆ. ಯಾತ್ರೆಯ ವೇಳೆ ಲಕ್ಷಾಂತರ ಭಕ್ತರು ದರ್ಶನಕ್ಕೆ ಬರುವುದರಿಂದ ಅಲ್ಲಿನ ಬುಡಕಟ್ಟು ಜನರು ಕೋಟಿಗಟ್ಟಲೆ ವಹಿವಾಟು ನಡೆಸುತ್ತಾರೆ. ಇದರಿಂದ ಸ್ಥಳೀಯರಿಗೆ ಉದ್ಯೋಗ ದೊರಕಿ ಲಕ್ಷ್ಮೀದೇವಿ ನಿಜ ಅರ್ಥದಲ್ಲಿ ಸ್ಥಳೀಯರಿಗೆ ಒಲಿದಿದ್ದಾಳೆ.

ದೇವಾಲಯದ ಅರ್ಚಕರು ಮತ್ತು ಬುಡಕಟ್ಟು ಜನಾಂಗದವರು ದೇವಿಯನ್ನು 'ಕೊಲವಂಚಿ ಮಹಾಲಕ್ಷ್ಮಿ' ಎಂದು ಕರೆಯುತ್ತಾರೆ. ಕೊಲ್ವನ್ ಎಂಬ ಪದದ ಅರ್ಥ ಕೋಲಿ ಜನರ ದೇವತೆ.

ಮಾಘ ಮಾಸದ ಶುದ್ಧ ದ್ವಾದಶಿಯಂದು ಚೈತ್ರ ಪೌರ್ಣಿಮಾ, ನವರಾತ್ರಿ ಉತ್ಸವ ಮತ್ತು 'ವಾಘಬರ್ಷಿ' ಎಂಬ ಮೂರು ಹಬ್ಬಗಳನ್ನು ದೇವಿಯ ಹೆಸರಿನಲ್ಲಿ ಆಚರಿಸಲಾಗುತ್ತದೆ. ಭಂಡಾರಿ, ವಡ್ವಾಲ್, ಕೋಲಿ, ತೋಟಗಾರರು, ಆದಿವಾಸಿಗಳು ಮತ್ತು ಕೃಷಿಕರು ದೇವಿಯ ದರ್ಶನಕ್ಕೆ ಸದಾ ಕಿಕ್ಕಿರಿದು ತುಂಬಿರುತ್ತಾರೆ. 'ಬರ್ಷಿ ಮಹಾಲಕ್ಷ್ಮಿ' ದೇವಸ್ಥಾನದ ಒಂದು ಪ್ರಮುಖ ಹಬ್ಬವಾಗಿದೆ. ಆ ಹಬ್ಬಕ್ಕೆ ವಿವಿಧ ಬುಡಕಟ್ಟುಗಳ ಜನರು ಒಗ್ಗೂಡುತ್ತಾರೆ. ಅಂದು ಎಲ್ಲಾ ಬುಡಕಟ್ಟು ಜನರು 'ತರ್ಪ' ನೃತ್ಯ ಮಾಡುತ್ತಾರೆ. ಹೊಲದಲ್ಲಿ ಹೊಸ ಬೆಳೆ ಬರುತ್ತಿದ್ದರೆ ಆ ಖುಷಿಯೇ ಬೇರೆ.

### ತಲುಪುವುದು ಹೇಗೆ?

ರಸ್ತೆಯ ಮೂಲಕ ರಾಷ್ಟ್ರೀಯ ಹೆದ್ದಾರಿ ಎನ್ ಎಚ್ 48ರಿಂದ ಮುಂಬಯಿ ಅಹಮದಾಬಾದ್ ಹೈವೇ ಮೂಲಕ ದಹಾಣೂ ಮಹಾಲಕ್ಷ್ಮೀ ದೇವಸ್ಥಾನವನ್ನು ತಲುಪಬಹುದು. ಇದು ದಹಾಣೂ ಚರೋಟಿ ನಾಕಾದಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿದೆ. ದೇವಸ್ಥಾನವನ್ನು ತಲುಪಲು ದಹಾಣೂ ಚರೋಟಿ ನಾಕಾಕ್ಕೆ ಬಸ್ಸುಗಳು, ಆಟೋ ರಿಕ್ಷಾಗಳು ಮತ್ತು ಇತರ ಖಾಸಗಿ ವಾಹನಗಳು ಇವೆ. ದೇವಸ್ಥಾನ ದಹಾಣೂ ರೈಲು ನಿಲ್ದಾಣದಿಂದ 28 ಕಿ.ಮೀ. ದೂರವಿದೆ.

2019 ರಲ್ಲಿ 'ಇಲ್ಲಿ ಬಾಂಗ್ಲಾ ಅರ್ಚಕರಿದ್ದಾರೆ' ಎಂಬ ಗಾಳಿಸುದ್ದಿಯೊಂದು ರೂಪುಗೊಂಡು ದೇವಸ್ಥಾನ ಭಾರೀ ಸುದ್ದಿಮಾಡಿತ್ತು. 'ದಹಾಣೂವಿನ ಪ್ರಸಿದ್ಧ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಅರ್ಚಕರಾಗಿ ಕೆಲಸ ಮಾಡುತ್ತಿರುವವರಲ್ಲಿ ಒಬ್ಬರು ಬಾಂಗ್ಲಾದೇಶದ ಪ್ರಜೆ' ಎಂಬ ಪ್ರಚೋದನಕಾರಿ ಸುಳ್ಳು ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿತ್ತು.

ದೇವಸ್ಥಾನದ ಸಮೀಪವಿರುವ ಧರ್ಮಶಾಲೆಯಲ್ಲಿ ಯಾತ್ರಿಕರಿಗೆ ಕೊಠಡಿಗಳು ಲಭ್ಯವಿದೆ. ಕುಟುಂಬದೊಂದಿಗೆ ಧಾರ್ಮಿಕ ಪ್ರವಾಸಕ್ಕೆ ಅಥವಾ ಪ್ರಕೃತಿಯ ಆನಂದ ಸವಿಯಲು ದಹಾಣೂ ಒಳ್ಳೆಯ ತಾಣ.

ಪ್ರತಿಕ್ರಿಯಿಸಿ: feedback@sudha.co.in